ಈ ಪ್ರಕರಣ ಬರೆಯುತ್ತಿರುವಾಗಲೇ ಇಂಥ ವಿವೇಕೋದಯವಾಗುತ್ತಿರುವ ಒಂದು ಅತ್ಯಂತ ಶುಭಸೂಚನೆಯೂ ದೇಶದಲ್ಲಿ ಒಂದುಕಡೆಗೆ ಕಾಣಹತ್ತಿದ್ದು ಭವಿಷ್ಯದ ಬಗ್ಗೆ ಆಶೆಯನ್ನು ಹುಟ್ಟಿಸುವಂಥದ್ದಾಗಿದೆ. ಅದೆಂದರೆ ಮದ್ರಾಸ ರಾಜ್ಯ ಸರಕಾರವು ಇತ್ತಿತ್ತಲಾಗಿ ಸುರುಮಾಡಿದ್ದ ಸೆರೆ ಸಿಂದಿ ಅಂಗಡಿಗಳನ್ನು ಮತ್ತೆ ಮುಚ್ಚಿ ಬಿಡುವ ನಿರ್ಣಯಕ್ಕೆ ಬಂದ ಸುದ್ದಿವೃತ್ತ ಪತ್ರಿಕೆಗಳಲ್ಲಿ ಪ್ರಸಿದ್ಧವಾದದ್ದು. ಬಡವರ ನಿಜವಾದ ಕಳಕಳಿ ಇದ್ದವರು ಈ ದಾರಿಗೆ ಬರಲೇ ಬೇಕಾಗುವದು. ನಮ್ಮ ಕಾಂಗ್ರೆಸ ಸರಕಾರಗಳು ದ್ರಾಮುಕ ಸರಕಾರದ ನೀತಿಯಿಂದಾದರೂ ಬುದ್ಧಿಕಲಿಯಲೆಂದು ಹಾರೈಸೋಣ.

ನಿರ್ಧಾರದಿಂದ ಕಾರ್ಯ ಪ್ರವೃತರಾಗಬೇಕು.

ಕೆಲವು ಅತ್ಯಂತ ಮಹತ್ವದ ಸಂಗತಿಗಳನ್ನು ಸಾಧಿಸಿಯೇ ತಿರುವೆವೆಂಬ ನಿರ್ಧಾರ ಬೇಕು. ಶ್ರದ್ಧೆ ಬೇಕು. ಶುಷ್ಕವಾದ ಹಾಳು ಹರಟೆ ಒಣ ಟೀಕೆ ನಿಲ್ಲಬೇಕು. ಅಂದರೆ ನಮ್ಮ ನಿಜವಾದ ಪ್ರಗತಿಯಾದೀತು. ಮತ ದೊರಕಿಸುವದಕ್ಕಾಗಿ ಹುರುಳಿಲ್ಲದ ಪೊಳ್ಳು ಘೋಷಣೆ ಮಾಡಿ ಈ ಕಾರ್ಯವಾಗಲಾರದು. ನಮ್ಮ ಯುವಕರು ಈ ಬಗ್ಗೆ ಗಂಭೀರವಾಗಿ ವಿಚಾರಿಸದಿದ್ದರೆ ಅವರ ಭವಿಷ್ಯ ಹಾಗೂ ದೇಶದ ಭವಿತವ್ಯ ಕತ್ತಲಲ್ಲಿಯೇ ಉಳಿದೀತು.

ಪಾನ ಪ್ರತಿಬಂಧ ಆಗಲಿ

ಅತ್ಯಂತ ಮಹತ್ವದ ಮೊದಲನೇ ವಿಷಯ ಪಾನಪ್ರತಿಬಂಧ. ಈ ವಿಷಯವನ್ನು ಎತ್ತುವದೇ ತಡ ತಾವು ಸುಶಿಕ್ಷಿತರೆಂದು ತಿಳಿದುಕೊಂಡಿರುವ ಅಶಿಕ್ಷಿತರೋ, ಅರ್ಧಶಿಕ್ಷಿತರೋ ಅಥವಾ ಕುಶಿಕ್ಷಿತರೋ, ಒಮ್ಮಲೆ ಇದು ಶಕ್ಯವಿಲ್ಲ, ಮಾಡಿ ನೋಡಿದ್ದಾಯಿತು ಇದು ಯಶಸ್ವಿಯಾಗಲಾರದು, ಎಂಬ ನಿರಾಶೆಯ ನಿಟ್ಟುಸುರು ಎಳೆಯುವದು, ಅವರ ವಿಚಾರಸರಣಿಯಲ್ಲಿಯೇ ಖಂಡಿತವಾಗಿ ದೋಷವಿದೆ ಯೆಂಬುದನ್ನು ಇಲ್ಲಿ ತೋರಿಸ ಬೇಕಾಗಿದೆ. ಪಾನಪ್ರತಿಬಂಧವು ಆಯೋಗ್ಯವೆಂದು ಯಾರು ಅನ್ನುವದಿಲ್ಲ. ಆದರೆ ಅದರ ಮೇಲೆ ಶ್ರದ್ಧೆಯಿಲ್ಲದ್ದರಿಂದ ಅವರ ನಿರಾಶೆವಾಗಿದೆ. ಪ್ರಾಚೀನಕಾಲದಿಂದಲೂ ಮಾದಕ ಪದಾರ್ಥ ಸೇವನೆ ನಡೆಯುತ್ತಲೇ ಬಂದಿರುವದರಿಂದ ಅದನ್ನು ನಿಲ್ಲಿಸುವಮ ಸಾಧ್ಯವಿಲ್ಲ ವೆಂಬದು ಅವರ ಮೊದಲನೇ ಆಕ್ಷೇಪ. ಈ ಆಕ್ಷೇಪದಲ್ಲಿ ಯಾವ ಹುರಳೂ ಇಲ್ಲ. ಬಹುದಿನಗಳಿಂದ ನಡೆಯುತ್ತ ಬಂದ ಕೆಟ್ಟರೂಢಿ ಕೆಟ್ಟ ನಿಯಮಗಳೆನ್ನು ಈಗ ನಾವು ತಿದ್ದುವ, ನಿಲ್ಲಿಸುವ ಪ್ರಯತ್ನ ಮಾಡಬಾರದೇ ? ಹಾಗಾದರೆ ನಮ್ಮ ದೇಶದ ನೂರಕ್ಕೆ

೯೦ ರಷ್ಟು ಜನರ ರಕ್ತಮಾಂಸಗಳಲ್ಲಿ ನೆಲೆಯೂರಿದ ಅಸ್ಪೃಶ್ಯತೆಯನ್ನು ಹಾಗೆಯೇ ಉಳಿಯುಗೊಡಬೇಕೇ ? ವೈಯಕ್ತಿಕ ಒಡೆತನದ ಮೋಹವನ್ನು, ಅದಕ್ಕೆ ಬಂಡವಲಶಾಹಿಯೆನ್ನಿರಿ ಏನೇ ಅನ್ನಿರಿ, ಅದನ್ನು ಹಾಗೆಯೇ ಮುಂದುವರಿಸಿಕೊಂಡು ಹೋಗಬೇಕೇ ? ಎಷ್ಟೇ ಪ್ರಯತ್ನ ಮಾಡಿ ಕೆಟ್ಟರೂಡಿಗಳನ್ನು ವಿಚಾರಗಳನ್ನು ಇಲ್ಲದಂತೆ ಮಾಡಲೇ ಬೇಕು ಇಷ್ಟಾಗಿಯೂ ಅವು ನೂರಕ್ಕೆ ನೂರರಷ್ಟು ನಾಶವಾಗಲಿಕ್ಕಿಲ್ಲ. ತುಸು ತುಸು ಉಳಿಯು ಬಹುದಾದರೂ ನಿರಾಶೆ ಏಕೆ ? ಕಳವು ಕೊಲೆ ಸುಲಿಗೆಗಳಿಗೆ ಶಿಕ್ಷೆ ಕೊಡುತ್ತಿರುವದು ಆದಿಯಿಂದ ನಡೆಯುತ್ತ ಬಂದಿದ್ದರೂ ಸಂಪೂರ್ಣ ನಿಂತಿಲ್ಲವೆಂಬ ಕಾರಣದಿಂದ ಶಿಕ್ಷೆಯು ಈ ಕಲಮುಗಳನ್ನೇ ರದ್ದು ಪಡಿಸಬೇಕೆಂದು ಯಾವನೇ ಸಮಂಜಸ ವ್ಯಕ್ತಿಯು ಅನ್ನಲಾರ.

ಈ ವಿಷಯದಲ್ಲಿ ಎರಡನೆಯ ಮಹತ್ವದ ಮಾತೆಂದರೆ ನಮ್ಮ ಸದ್ಯವದಿಂದ ಭಾರತೀಯ ಸಂಸ್ಕೃತಿಯಲ್ಲಿ ಪಾನಪ್ರತಿಬಂಧಕ್ಕೆ ಮಹತ್ವದ ಸ್ಥಾನವಿದೆ. ಶ್ರೀ ಶಂಕರಾದಿ ಆಚಾರ್ಯರೂ, ಬಸವಾದಿ ಪ್ರಮಥರೂ, ಬುದ್ಧ, ಪೈಗಂಬರಾದಿ ಧರ್ಮಸ್ಥಾಪಕರೂ, ಮಹಾವೀರರೇ ಆದಿ ತೀರ್ಥಂಕರರೂ ಅತ್ಯಂತ ಕಠೋರವಾಗಿ, ಈ ದುಶ್ಚಟವನ್ನೂ ಖಂಡಿಸಿದ್ದರಿಂದಲೇ ಅವರ ಪ್ರಭಾವದಿಂದ ನಮ್ಮ ದೇಶದಲ್ಲಿ ಬಹಳಷ್ಟು ಜನ ಇನ್ನೂ ಈ ವ್ಯಸನದಿಂದ ಮುಕ್ತರೇ ಆಗಿದ್ದಾರೆ. ನೂರಕ್ಕೆ ೫೦ ರಷ್ಟು ಸಂಖ್ಯೆಯಲ್ಲಿರುವ ಸ್ತ್ರೀಯರೂ ೨೫ ರ ಕ್ಕಿಂತ ಹೆಚ್ಚಿಗೆ ಇರುವ ಮಕ್ಕಳು ಅಂದರೆ ನೂರಕ್ಕೆ ೭೬ರಷ್ಟು ಜನ ಇಂದಿಗೂ ಈ ವ್ಯಸನದಿಂದ ಮುಕ್ತರೇ ಆಗಿದ್ದಾರೆ. ಉಳಿದ ೨೪ ರಷ್ಟು ಜನರಲ್ಲಿ ಎಲ್ಲರೂ ಕುಡಿಯುವರೆಂದು ತಿಳಿಯುವದು ಮೂರ್ಖತನದ್ದಾದೀತು. ನಿಜವಾದ ಸುಶಿಕ್ಷಿತರು, ಸುವಿಚಾರಿಗಳು, ಸುಸಂಸ್ಕೃತರೂ, ನೀತಿವಂತರೂ, ಮರ್ಯಾದೆಯುಳ್ಳವರೂ ಕುಡಿಯುವದಿಲ್ಲ. ಇವರ ಪ್ರಮಾಣ ನಿಸ್ಸಂಶಯವಾಗಿ ಈ ೨೪ ರಲ್ಲಿ ೧೪ ಇದೆ. ಅಂದಮೇಲೆ ಕೇವಲ ನೂರಕ್ಕೆ ೧೦ ರಷ್ಟೇ ಜನರು ಮಾತ್ರ ಸದ್ಯ ಈ ವ್ಯಸನದಲ್ಲಿರುವರೆಂದೆಂಬದು ಸ್ಪಷ್ಟವಾಯಿತು. ನೂರಕ್ಕೆ ೯೦ ರಷ್ಟು ಜನರು ಸಹ ಮೈಮೆಲೆ ಅರಿವು ಇದ್ದಾಗ ಈ ಚಟಕೆಟ್ಟಿದ್ದಿಂತಲೇ ಒಪ್ಪುವದರಿಂದ ಅವರ ಅಪ್ರತ್ಯಕ್ಷ ಬೆಂಬಲವೂ ಇರುವಾಗ ನಮ್ಮ ಸರಕಾರಗಳಿಗೆ ಇದನ್ನು ಯಶಸ್ವಿ ಮಾಡಲು ಆಗುವದಿಲ್ಲವೆಂದು ತಿಳಿಯುವದು ಶುದ್ಧ ಆತ್ಮವಂಚನೆ ಆದೀತು. ನೂರಕ್ಕೆ ೯೦ ರಷ್ಟು ಜನರಂತೂ ಪೂರ್ಣಬೆಂಬಲ ಮನಸ್ಸಿನಿಂದ ಕೊಡುವಾಗ ಈ ಕೆಟ್ಟ ಚಟ ನಿರ್ನಾಮ ಮಾಡಲು ಆಗದೆಂದು ಹೇಳುವ ಸರಕಾರಕ್ಕೆ, ಮುಖಂಡರಿಗೆ, ವೃತ್ತಪತ್ರ ಸಂಪಾದಕರಿಗೆ, ಸುಶಿಕ್ಷಿತರೆಂಬ ಭ್ರಮೆಯಲ್ಲಿರುವ ಅರಣ್ಯ ಪಂಡಿತರಿಗೆ ಅಸ್ಪೃಷ್ಯತಾ ನಿವಾರಣೆ ಯಾಗುವದು ಸಾಧ್ಯವೆಂದು ಅನ್ನಲು ಹೇಗೆ ಬಂದಿತು ? ಮೇಲಿನಂತೆ ಅಂಕಿಸಂಖ್ಯೆಗಳಿಂದ ಹೇಳುವದಾದರೆ ನೂರಕ್ಕೆ ೫೦ ರಷ್ಟು ಸ್ತ್ರೀಯರೂ, ೨೫ ರಷ್ಟು ಮಕ್ಕಳೂ ೧೪ ರಷ್ಟು ಮಡಿವಂತರೂ ಶೀಲವಂತರೂ ಈ ಕ್ಷಣಕ್ಕೂ ಅಸ್ಪೃಶ್ಯತೆಯು ಅನಿವಾರ್ಯವೆಂದು ತಿಳಿಯುವದಿಲ್ಲವೇ ? ಆದರೂ ಈ ಕೆಟ್ಟಕಲಂಕ ಈ ಅನಿಷ್ಟ ರೂಢಿ ನಿರ್ನಾಮ ಮಾಡುವ ಪ್ರಯತ್ನ

ಮಾಡುತ್ತೆವೆಲ್ಲವೇ ? ಅದನ್ನು ಮಾಡಲೇ ಬೇಕು. ಅತ್ಯಂತ ತೀವ್ರವಾಗಿ ಮಾಡಬೇಕು. ಆಂದಮೇಲೆ ಪಾನಪ್ರತಿಬಂಧವೇಕೆ ಯಶಸ್ವಿಯಾಗಲಿಕ್ಕಿಲ್ಲ ? ಆಗಲೇಬೇಕೆಂಬ ಶ್ರದ್ಧೆ ಸರಕಾರದ್ದಾಗಿರೆ ಆಗಿಯೇ ತೀರುವದು.

ಕುಡಿಯುವವರಿಗೆ ಕಠಿಣ ಶಿಕ್ಷೆ

ಭಾರತೀಯರಾದ ನಮ್ಮ ಮನಸ್ಸು ಕಾಯದೆಗೆ ಶಿಕ್ಷೆಗೆ ಅಂಜುವ ಮನಸ್ಸಾಗಿದೆ. ಕಠೋರ ಕಾಯೆದೆ ಮತ್ತು ದಕ್ಷಕಾರ್ಯಾಚರಣೆಯಿಂದ ತೀರ ಕಡಿಮೆ ಅವಧಿಯಲ್ಲಿ ಈ ದುಶ್ಚಟ ಇಲ್ಲದಂತೆ ಮಾಡಬಹುದು. ಒಂದೆರಡು ರೂಪಾಯಿ ದಂಡ, ಕೋರ್ಟು ಏಳುವವರೆಗಿನ ಶಿಕ್ಷೆ ಮಾಡಿ ಹುಡುಗಾಟಕೆಯಿಂದ ನಡೆದರೆ ಇದನ್ನು ಸಾಧಿಸಲಾಗದು.

ಕುಡಿದವನಿಗೆ ಕನಿಷ್ಠ ೬ ತಿಂಗಳ ಶಿಕ್ಷೆ ಮತ್ತು ೫೦೦ ರೂ. ದಂಡ ಮತ್ತು ಭಟ್ಟಿ ಸೆರೆ ಮಾಡುವವರಿಗೆ ಕನಿಷ್ಠ ೨ ವರ್ಷ ಶಿಕ್ಷೆ ಮತ್ತು ಎರಡು ಸಾವಿರದ ದಂಡ ವಿಧಿಸುವ ದಾದರೆ ಒಂದೇ ವರುಷದಲ್ಲಿ ಈ ಸುರಾರಾಕ್ಷಸನು ನಿರ್ನಾಮವಾಗಬಹುದು. ದಂಡ ವಸೂಲ ಮಾಡುವಾಗ ಯಾವದೇ ಸವಲತ್ತು ತೋರಿಸದೆ ಮನೆ ಮಾರು ಕಾಳು ಕಡಿ, ದನಕರ ಬಟ್ಟೆಬರೆ ಪಾತ್ರೆ ಸಹ ಜಪ್ತಿ ಮಾಡಿದರೆ ಅದರ ಪರಿಣಾಮ ವಿಲಕ್ಷಣವಾದೀತು. ಹೇಡಿ ಸರಕಾರವೆಂದು ಕೇಡಿಗಳು ಆಡಿಕೊಳ್ಳುವ ಈ ಸರಕಾರದಿಂದ ಈ ಕೆಲಸ ಆಗದಿದ್ದರೆ ಈ ಸರಕಾರ ಕಿತ್ತಿ ಒಗೆಯುವ ವಿಶ್ವಾಸ ನಮ್ಮ ತರುಣರಿಗೆ ಬೇಕು. ೧೯೨೨ ರ ಆಂದೋಲನವನ್ನು ಆಗಿನ ಸರಕಾರ ಕೇವಲ ದಂಡದ ಹೆದರಿಕೆಯಿಂದಲೇ ನಿಲ್ಲಿಸಿಬಿಟ್ಟಿತ್ತು. ಅದು ಸ್ವರಾಜ್ಯದ ಚಳವಳಿಯಾಗಿತ್ತು. ಎಲ್ಲರ ಸಹಾನುಭೂತಿಯೂ ಇತ್ತು. ಆದರೂ, ಅದು ದಂಡದ ಭಯದಿಂದ ನಿಂತುಹೋಯಿತು. ಪಾನಪ್ರತಿಬಂಧಕ್ಕೆ ಇಡೀ ಜನತೆಯ ಬೆಂಬಲವಿರುವಾಗ ಅದು ಯಶಸ್ವಿ ಆಗಲೇ ಬೇಕು. ಆದರೆ ಅಂಥ ಶ್ರದ್ಧೆ ಬೇಕು ಸರಕಾರಕ್ಕೆ. ಅದು ಇರದಿದ್ದರೆ ಅಂಥ ಸರಕಾರವನ್ನು ಕಿತ್ತಿಹಾಕುವ ಹುಮ್ಮಸ ಬೇಕು ತರುಣರಿಗೆ. ನಿಷ್ಕ್ರಿಯರಿಂದ ಯಾವಸಿದ್ಧಿಯೂ ಆಗಲಾರದು, ಯಾವದೇಶವೂ ಪ್ರಗತಿ ಹೊಂದಲಾರದು.

ಭಯಸೂಚಕ ಗಂಟೆ

ಒಂದೇಒಂದು ಭಯಸೂಚಕ ಗಂಟೆ ಬಾರಿಸಿ ಈ ವಿಷಯ ಮುಗಿಸೋಣ. ನೂರಕ್ಕೆ ೧೦ ರಷ್ಟು ಕುಡಕರು ಬರಬರುತ್ತ ಬೆಳೆಯುತ್ತಿದ್ದಾರೆ. ಕಾಲೇಜ ವಿದ್ಯಾರ್ಥಿಗಳಲ್ಲಿ ಈ ಚಟ ಭರದಿಂದ ಪ್ರಸಾರವಾಗಹತ್ತಿದೆ. ಅಧಿಕಾರಿಗಳೂ ಮಂತ್ರಿಗಳೂ ಮೈಮೇಲೆ ಅರಿವು

ಇಲ್ಲದೆ ಈ ಚಟಕ್ಕೆ ಬಲಿ ಬೀಳಹತ್ತಿದ್ದಾರೆ. ಸುರಾಪಾನವು ಒಂದು ಫ್ಯಾಶನ್ ಆಗಹತ್ತಿದೆ. ಶಿಷ್ಟತನದ ಮುದ್ರೆ ಅದಕ್ಕೆ ಬೀಳಹತ್ತಿದೆ. ಮಾನವನನ್ನು ದಾನವನನ್ನಾಗಿ ಮಾಡುವ, ನೀತಿಯ ನೆಲಗಟ್ಟಿನ್ನೇ ಹಾಳುಮಾಡುವ ಈ ಮಹಾಭಯಂಕರ ಚಟದ ಕಡೆಗೆ, ರೋಗದ ಕಡೆಗೆ ದುರ್ಲಕ್ಷಮಾಡಿ ದೇಶದ ಪ್ರಗತಿಯಾಗಲಾರದು, ಕಲ್ಯಾಣವಾಗ ಲಾರದು. ಅಂತೆಯೇ ಗಾಂಧೀಜಿಯವರು ಈ ಬಗ್ಗೆ ಕರಳು ಹರಿದುಕೊಂಡು ಹೇಳಿದರು. ಪಾನಪ್ರತಿಬಂಧ ಕಠೋರವಾಗಿ ಅನುಷ್ಠಾನಕ್ಕೆ ತರದಿದ್ದರೆ ಗರೀಬಿ ಹಟಾವೂ ಘೋಷಣೆ ಶುದ್ಧ ಬಡಬಡಿಕೆಯಾದೀತು ! ಒಂದು ಬರಿದಾದ ಹೌದಿನಲ್ಲಿ ಒಂದು ಇಂಚಿನ ಪಾಯಿಪದಿಂದ ನೀರು ಬಿಟ್ಟು ಅದರ ಕೆಳಗೆ ಇರುವ ಎರಡು ಇಂಚಿನ ತೂತು ಮುಚ್ಚಿ ದಿದ್ದರೆ ಎಷ್ಟೇ ಎಂಜಿನ್‌ಸುಟ್ಟರೂ, ಇಂಜನ್ ಸವೆದರೂ, ಆ ಚಿಕ್ಕ ಹೌದು ಹೇಗೆ ತುಂಬ ಲಾರದೋ ಅದೇರೀತಿ ದುರ್ವ್ಯಸನಗಳಿಗೆ ಹಾಳಾಗಿ ಹೋಗುವ ಹಣ ನಿಲ್ಲಿಸದಿದ್ದರೆ ಬಡವರು ಆದಾಯ ಬೆಳಿಸಿಕೊಂಡರೂ ಅವರ ಬಡತನ ಹಿಂಗಲಾರದು. ದಿನಾಲು ಆರೆಂಟು ರೂಪಾಯಿ ಗಳಿಸುವ ಕೂಲಿಯವನು ಮನೆಗೆ ಬರುವಾಗ ದುರ್ವ್ಯಸನಗಳಲ್ಲಿ ಏಳು ರೂಪಾಯಿ ಹಾಳು ಮಾಡಿ ಒಂದೇ ರೂಪಾಯಿ ತರಹತ್ತಿದರೆ ಅವನು ಸಾಯುವ ವರೆಗೂ ಸ್ಥಿತಿವಂತನಾಗುವದಿಲ್ಲೆಂಬ ಚಿತ್ರವನ್ನು ಈ ಹೊತ್ತು ಅನೇಕ ಕಡೆಗೆ ನಾವು ನೋಡುವದಿಲ್ಲವೇ ? ಬಡವರಲ್ಲಿ, ಕೂಲಿಕಾರರಲ್ಲಿಯೇ ಹೆಚ್ಚಾಗಿ ಜನರು ಸುರಾಪಾನಿ ಗಳಾಗಿದ್ದಾರೆ. ಅದಕ್ಕೆ ಸರಕಾರವೇ ದುಡ್ಡಿನ ಆಶೆಗಾಗಿ ಉತ್ತೇಜನಕೊಟ್ಟು ಅವರ ಸ್ಥಿತಿ ಸುಧಾರಿಸಲು ಯೋಜನೆಗಳನ್ನು ಮಾಡುವ ಧೋರಣೆಯು ನಾಯಿಯು ಎಲುಬು ಚಗಳಿಸಿದಂತೆ ವ್ಯರ್ಥವಾಗಹತ್ತಿದೆ. ಎಲುಬಿನಲ್ಲಿ ರಕ್ತವಿರದಿದ್ದರೂ ಅದನ್ನು ಕಟಕರಿ ಸುವಾಗ ತನ್ನ ಹಲ್ಲಿನಿಂದ ಹೊರಡುವ ರಕ್ತವೇ ಆ ಎಲುಬಿಗೆ ಹತ್ತುತ್ತಿದೆ ಎಂಬುದನ್ನು ಅರಿಯದೆ ಅದರ ಚಗಳಿಕೆ ಸಾಗುವಂತೆ ಆಗಿದೆ ಅವರ ಸ್ಥಿತಿ. ಜಗತ್ತಿನ ಯಾವ ದೇಶ ದಲ್ಲಿಯೂ ಈ ಪಾನ–ಪ್ರತಿಬಂಧ ಯಶಸ್ವಿಯಾಗದಿದ್ದರೂ ಅದು ಭಾರತದಲ್ಲಿ ಖಂಡಿತ ವಾಗಿ ಸಾಧಿಸುವಂತೆ ನಮ್ಮ ಹಿನ್ನೆಲೆಯಿದೆ. ಕೆಟ್ಟದ್ದಾದ ಭಟ್ಟಿ ಸೆರೆ ನಿಲ್ಲಿಸುವದಕ್ಕಾಗಿ ಸರಕಾರಿ ಅಂಗಡಿಗಳನ್ನು ತೆರೆಯುವದು ಉಪಾಯವಾಗಲಾರದು. ಎರಡೂ ಕಡೆಗೆ ಕುಡಿತ ನಡೆಯುವದನ್ನು ಈಗ ಅನುಭವದಿಂದ ಗೊತ್ತಾಗಿಲ್ಲವೇ ?

ಸಾವಕಾರಿ ಸಾಲ

ಬಡವರನ್ನು ಹಿಂಡಿ ಹೀರುತ್ತಿರುವ ಇನ್ನೊಂದು ಮಹಾವ್ಯಾಧಿಯ ಕಡೆಗೂ ಯಾರ ಲಕ್ಷ್ಯವಿಲ್ಲದಾಗಿದೆ. ಶ್ರಾವಣ–ಭಾದ್ರಪದಗಳಲ್ಲಿ ಹೊಟ್ಟೆಗಾಗಿ ಒಂದು ನೂರು ರೂಪಾಯಿ ಸಾಲತಂದು ಸುಗ್ಗಿಯಲ್ಲಿ ಅದಕ್ಕಾಗಿ ಒಂದು ಚೀಲ ಜೋಳವನ್ನು ಬಡ್ಡಿಯ ರೂಪದಲ್ಲಿ ಕೊಡುತ್ತಿರುವ ವ್ಯವಹಾರ ಅನಿರ್ಬಂಧವಾಗಿ ಎಲ್ಲಕಡೆಗೆ ನಡೆದಿದೆ. ಇದು ಸರಕಾರಕ್ಕೆ ಗೊತ್ತಿದ್ದರೂ ದೊಡ್ಡದಾದ ಇನ್ನೊಂದು ತೂತು ಮುಚ್ಚದೆ ಬಡವರ ಕಲ್ಯಾಣದ ಮಾತುಸಾಗಿವೆ !

ಕುಟುಂಬ ಯೋಜನೆಯ ಪರಿಣಾಮವು ನಮ್ಮ ಶೀಲವನ್ನೂ ಚಾರಿತ್ರ್ಯವನ್ನೂ ಹರಣ ಮಾಡಿ ಬಿಡಹತ್ತಿದೆ. ಭಾರತದಲ್ಲಿ ಸ್ತ್ರೀ ಪಾವಿತ್ರ್ಯತೆಗೆ ಇದ್ದಷ್ಟು ಮಹತ್ವ ಜಗತ್ತಿನ ಯಾವ ರಾಷ್ಟ್ರದಲ್ಲಿಯೂ ಇಲ್ಲದಿರುವದು ನಮ್ಮ ಆರ್ಯ ಸಂಸ್ಕೃತಿಯ ಶ್ರೇಷ್ಠತೆ, ರಾಮಾಯಣ ಮಹಾಭಾರತಗಳು ಇದಕ್ಕೆ ಉದಾಹರಣೆಗಳಾಗಿವೆ. ಅದು ಇಂದು ನಮ್ಮದೇ ಆದ ಸ್ವರಾಜ್ಯದಲ್ಲಿ ಹಾಳಾಗಿ ಹೋಗಹತ್ತಿದೆ. ಸುಶಿಕ್ಷಿತ, ದೊಡ್ಡ ಮನೆತನಸ್ಥರೆಂದು ಹೇಳಿಕೊಳ್ಳುವ ಕಾಲೇಜ ಕುಮಾರಿಯರು ಲಾಜಿಂಗುಗಳಿಗೆ ಅಪರಾತ್ರಿ ಹೋಗಿ ಒಂದೆರಡು ತಾಸು ವೇಶ್ಯಾವ್ಯವಸಾಯ ಮಾಡಿ ಹಣಗಳಿಸುತ್ತಿರುವ ಭೀಕರ ಚಿತ್ರ ಪಟ್ಟಣಗಳಲ್ಲಿ ಇಂದು ನೋಡಹತ್ತಿದ್ದೇವೆ ಈ ನಮ್ಮ ಸ್ವರಾಜ್ಯದಲ್ಲಿ !

ದುಡಿಯದ ದೊಡ್ಡಪ್ಪ

ವಿಷಮತೆಯು ಇಂದು ವಿಪರೀತವಾಗಿ ಬೆಳೆಯುತ್ತಿದೆ. ಶ್ರೀ ಸಾಮಾನ್ಯನ ಆದಾಯದ ಬಹಳವಾದರೆ ೧೦, ೨೦, ಪಟ್ಟಿಗಿಂತ ಹೆಚ್ಚಿಗೆ ಆದಾಯ ಯಾರಿಗೂ ಇರಬಾರದೆಂದು ಬಾಯಿಯಿಂದ ಜಪ ಮಾಡುತ್ತ ಈ ಅಂತರವನ್ನು ೫೦೦ ಪಟ್ಟಿಗೆ ಹೆಚ್ಚಿಸಲಾಗಿದೆ. ಜೂಜಾಟಿಗೆ ಪ್ರತ್ಯಕ್ಷವಾಗಿ ಸರಕಾರ ಉತ್ತೇಜನ ಕೊಡಹತ್ತಿದೆ. ದುಡಿಯದೇ ದುಡ್ಡು ಗಳಿಸಿ ದೊಡ್ಡವನಾಗಲು ಸರಕಾರವೇ ಆಸ್ಪದ ಮಾಡಿಕೊಟ್ಟಿದೆ. ಬಡವರ ಉದ್ಧಾರದ ಮಾತು ಹೇಳುವ ಯಾವ ಮುಖಂಡರೂ ಅವರಿಗೆ ೮ ತಾಸು ಪ್ರಾಮಾಣಿಕತನದಿಂದ ದುಡಿಯಲು ಹೇಳುವದಿಲ್ಲ. ಮೈಗಳ್ಳ, ಅಪ್ರಾಮಾಣಿಕ, ವ್ಯಸನಿ, ಚಾರಿತ್ರ್ಯಹೀನ ಸಮಾಜವು ಮೇಲೆ ಬರುವದು ಸಾಧ್ಯವಿಲ್ಲ. ತನ್ನ ಉಚ್ಚ ಸಂಸ್ಕೃತಿಯನ್ನು ತನ್ನತನವನ್ನು ಕಾಯ್ದುಕೊಳ್ಳದ, ಅಜ್ಞಾನ ದಾರಿದ್ರ್ಯಗಳಲ್ಲಿ ತೊಳಲಾಡುವದನ್ನು ತಪ್ಪಿಸದ ರಾಜ್ಯ 'ರಾಜ್ಯ'ವಲ್ಲ-ಸರಕಾರ ಸರಕಾರವಲ್ಲ ಎಂಬ ಅರಿವು, ಸಿಟ್ಟು, ಕಿಚ್ಚು ತರುಣರಲ್ಲಿ ಬರಬೇಕು. ಅದೇ ಜಾಗ್ರತ ಸಮಾಜದ ಲಕ್ಷಣ. ನಿರ್ದೋಷ ಹೆಣಗಳ ಬದಲು ಸಜೀವ ಹೆಣಗಳಾಗುವದು ತಪ್ಪಿದಾಗಲೇ ಪ್ರಗತಿಸಾಧ್ಯ. ಈ ಪ್ರಗತಿಗಾಗಿಯೇ ಸ್ವರಾಜ್ಯ ಬೇಕಾಗಿತ್ತು. ಅದಕ್ಕಾಗಿಯೇ ಎಲ್ಲ ದೇಶಭಕ್ತರು ದುಡಿದರು ಎಂಬ ಅರಿವು ಉಂಟಾಗಬೇಕು.

ನಿರುದ್ಯೋಗದ ಭೂತ

ನಿರುದ್ಯೋಗತನದ ಭೂತವು ಮಂತ್ರದಿಂದ ಬಿಡಲಾರದು. ಡೋಲುಕೊಟ್ಟು ಅದನ್ನು ಕಡಿಮೆ ಮಾಡಲಾಗದು. ಶಿಕ್ಷಣದಲ್ಲಿಯ ಮೂಲಭೂತ ದೋಷದಿಂದ ಈ ಭೂತವು ದಿನಾಲು ಮತ್ತಿಷ್ಟು ಉಗ್ರವಾಗಹತ್ತಿದೆ. ಮನುಷ್ಯ ಶಕ್ತಿ ವಿಪರೀತವಿದ್ದಲ್ಲಿ ಯಾಂತ್ರೀಕರಣಕ್ಕೆ ಕೇಂದ್ರೀಕರಣಕ್ಕೆ ಮಿತಿಯಿರದಿದ್ದರ ಪರಿಣಾಮ ಇದಾಗಿದೆ. ನಮ್ಮ ಕಾರಖಾನೆಗಳ ಉದ್ಯೋಗಗಳ ವಿಕೇಂದ್ರೀಕರಣವಾದಾಗಲೇ ಈ ಸಮಸ್ಯೆಗೆ ಪರಿಹಾರ

ದೊರಕೀತು. ಅಲ್ಲಲ್ಲಿ ತಹಸೀಲದಾರರಿಗೆ ಬರಗಾಲ ಕಾಮಗಿರಿಗಳನ್ನು ನಡೆಸಲು ಹೇಳುವ ಮಲಮುಪಟ್ಟಿಯಿಂದ ಈ ಮಹಾರೋಗ ನಿಯಂತ್ರಣದಲ್ಲಿ ಬರಲಾರದು. ತಾಲೂಕಿಗೆ ನೂರರಂತೆ ನಿರುದ್ಯೋಗಿಗಳಿಗೆ ಏನಾದರೂ ಒಂದು ಉದ್ಯೋಗ ಹುಡುಕಿ ಕೊಡುವ ಹುಡುಗಾಟಿಕೆ ನಿಲ್ಲಬೇಕು. ಕೋಟ್ಯಾವಧಿ ಜನರ ಸಮಸ್ಯೆ ಬಿಡಿಸುವದಿದೆ ಎಂಬದನ್ನು ಮೊದಲು ನೆನಪಿಟ್ಟು ಯೋಜನೆ ಮಾಡಬೇಕು. ಜವಳಿ ಉದ್ಯೋಗದ ವಿಕೇಂದ್ರಿಕರಣ ಮತ್ತು ಗ್ರಾಮೋದ್ಯೋಗದಲ್ಲಿ ರೂಪಾಂತರಪಾದರೆ ಸುಮಾರು ೩ ಕೋಟಿ ನಿರುದ್ಯೋಗಿಗಳಿಗೆ ಕೆಲಸ ಸಿಕ್ಕೀತು. ಈಗ ಭಾರತದ ಎಲ್ಲ ಜವಳಿ ಗಿರಣಿಗಳಲ್ಲಿ ಕೂಡಿ ಬಹಳವಾದರೆ ೧೨ ಲಕ್ಷ ಕಾರ್ಮಿಕರು ತೊಡಗಿದ್ದಾರೆ ಆದರೆ ಅದಕ್ಕಾಗಿ ತೊಡಗಿದ ಬಂಡವಲು ಕನಿಷ್ಟ ಆರು ಸಾವಿರ ಕೋಟಿ ರೂಪಾಯಿ ಇದೆ. ಅಂದರೆ ಒಬ್ಬ ಕೂಲಿಕಾರನಿಗೆ ೫೦ ಸಾವಿರ ರೂಪಾಯಿ ಬಂಡವಲ ತೊಡಗಿದೆ, ಇಷ್ಟೇ ಸಂಖ್ಯೆಯಲ್ಲಿ ಅಂದರೆ ೧೨ ಲಕ್ಷ ಕೂಲಿ ಕಾರರು ತಮ್ಮ ಹೊಟ್ಟೆ ಚನ್ನಾಗಿ ತುಂಬಿಕೊಳ್ಳುತ್ತಿರುವ ಖಾದಿ ಅಂಬರ ಚರಖಾ ಉದ್ಯೋಗದಲ್ಲಿ ಕೇವಲ ೫೦ (ಐವತ್ತು) ಕೋಟಿ ರೂಪಾಯಿ ಮಾತ್ರ ತೊಡಗಿದೆ. ಅಂದರೆ ಒಬ್ಬ ಕೂಲಿಕಾರನಿಗಾಗಿ ೪೫೦ ರೂಪಾಯಿ ಮಾತ್ರ ಬಂಡವಲು ತೊಡಗಿದೆ. ಇವು ಸರಕಾರಿ ಅಂಕಿಗಳು. ೫೦ ಸಾವಿರ ರೂಪಾಯಿ ಬಂಡವಲು ತೊಡಗಿಸಿ ಒಬ್ಬನಿಗೆ ಉದ್ಯೋಗ ಕೊಡುವದು ಸರಿಯೋ ೪೫೦ ರೂಪಾಯಿಯಲ್ಲಿ ಒಬ್ಬನಿಗೆ ಉದ್ಯೋಗ ಹಚ್ಚುವದು ಸರಿಯೋ ಎಂಬದನ್ನು ತೆರೆದ ಮನಸ್ಸಿನಿಂದ ಎಲ್ಲರೂ ವಿಚಾರಿಸಬೇಕು. ಕಾರಖಾನೆಗಳಿಂದ ಗಿರಣಿಗಳಿಂದ ನಿರುದ್ಯೋಗತನ ಬೆಳೆದೀತೇ ವಿನಃ ಕಡಿಮೆಯಾಗಲಾರದು. ಈಗಾಗಲೇ ನಮ್ಮ ದೇಶ ಬಟ್ಟೆಯನ್ನು ನಿರ್ಯಾತ ಮಾಡಹತ್ತಿದೆ. ಪ್ರತಿಯೊಂದು ರಾಷ್ಟ್ರವು ಸ್ವಾವಲಂಬಿಯಾಗಬೇಕೆನ್ನುವ ಸಂಕಲ್ಪ ಮಾಡಿದ ಈ ಕಾಲದಲ್ಲಿ ನಮ್ಮ ನಿರ್ಯಾತ ಇನ್ನು ಕಡಿಮೆಯೇ ಆದೀತು. ಹತ್ತಿಪ್ಪತ್ತು ವರುಷಗಳಲ್ಲಿ ? ಆಗ ಈ ಜವಳಿ ಗಿರಣಿಗಳನ್ನು ಬೆಳೆಯಿಸುವದು ಹುಚ್ಚುತನವಾದೀತು. ಇದನ್ನು ಮುಂಗಡ ತಿಳಿದು ೧೦ ವರುಷದ ಯೋಜನೆಹಾಕಿ ಎಲ್ಲಬಟ್ಟೆ ಗಿರಣಿಗಳನ್ನು ನಿಲ್ಲಿಸಿ ಅದನ್ನು ಗ್ರಾಮೋದ್ಯೋಗದಲ್ಲಿ ರೂಪಾಂತರಿಸಿದರೆ ತೀರ ಕಡಿಮೆ ಬಂಡವಲದಲ್ಲಿ ೩ ಕೋಟಿ ಜನರಿಗೆ ಉದ್ಯೋಗ ಕೊಡಲು ಬರಲಾರದೇ ? ಈಗ ಅಂಬರ ಚರಕದ ನೂಲು ಗಿರಣಿಯ ನೂಲಿನಂತೆಯೇ ನಯವಾಗಿರುವದನ್ನೂ ಇದು ವ್ಯವಹಾರ್ಯ ವಾಗಿದೆ ಯೆಂಬದನ್ನೂ ಅನುಭವದಿಂದ ನೋಡುತ್ತಿದ್ದಾಗ. ಎಳ್ಳಿನಿಂದ ಎಣ್ಣೆ ತೆಗೆಯುವದನ್ನು ವಿಚಾರಿಸದೆ ಉಸುಕಿನಿಂದ ಎಣ್ಣೆ ತೆಗೆಯುವ ಹಪ್ಯಾಸ ಮಾಡಬೇಕೋ ? ಎಂಬದನ್ನು ಶಾಂತ ರೀತಿಯಿಂದ ವಿಚಾರಿಸಬೇಕು. ಇದರಿಂದ ಒಂದೇ ಕಲ್ಲಿನಿಂದ ಎರಡು ಪಕ್ಷಿಗಳನ್ನು ಅಲ್ಲ—ರಾಕ್ಷಸರನ್ನು ಹೊಡೆದಂತಾದೀತು. (ಬಂಡವಲಶಾಹಿಯ ಒಂದು ರಾಕ್ಷಸ ನಿರುದ್ಯೋಗತನ ಇನ್ನೊಂದು ರಾಕ್ಷಸ.) ಇಂಥ ನಿಜವಾದ ಕ್ರಾಂತಿಕಾರಕ ಯೋಜನೆಗಳ ವಿಚಾರ ಮಾಡದೆ ಡೋಲುಕೊಟ್ಟು ಬಡತನ ನಿರುದ್ಯೋಗತನ ನಿವಾರಣೆ ಮಾಡುವ ಡೊಳ್ಳು ಬಾರಿಸುವ ಟೊಳ್ಳುತನ ನೋಡಿ ಖೊಳ್ಳನೆ ನಗೆ ಬರದಿರಲಾರದು. ಮತ್ತು ಸಂಕಟದಿಂದ ಕರಳೂ ಕತ್ತರಿಸುವವು. ನಮ್ಮ ಸರಕಾರಗಳು, ಕ್ರಾಂತಿವೀರರು, ತರುಣರು ಇದನ್ನು ವಿಚಾರಿಸುವರೇ ?